# 10ನೇ ಅನುಚ್ಛೇದ ಬಗ್ಗೆ ಪರಾಮರ್ಶೆ ನಡೆಸಲು ವೇದಿಕೆ ಸಿದ್ಧ

ಬೆಂಗಳೂರು: ಸಂವಿಧಾನದ 10ನೇ ಅನುಚ್ಛೇದ ಕುರಿತಂತೆ ಸ್ಪಷ್ಟತೆ ಪಡೆಯುವ ಸಲುವಾಗಿ ಎಲ್ಲ ರಾಜ್ಯಗಳ ಶಾಸನ ಸಭೆ ಪೀಠಾಸೀನಾಧಿಕಾರಿಗಳು (ಸ್ಪೀಕರ್) ಚರ್ಚೆ ನಡೆಸಲು ವೇದಿಕೆ ಸಿದ್ಧವಾಗಿದೆ.

**» ಡೆಹರಾಡೂನ್‌ನಲ್ಲಿ ಸ್ಪೀಕರ್‌ಗಳ ಸಮ್ಮೇಳನ**

79ನೇ ಅಖಿಲ ಭಾರತ ಶಾಸಕಾಂಗ ಸಂಸ್ಥೆಗಳ ಪೀಠಾಸೀನಾಧಿಕಾರಿಗಳ ಹಾಗೂ ಕಾರ್ಯದರ್ಶಿಗಳ ಸಮ್ಮೇಳನ ಮಂಗಳವಾರ ಡೆಹರಾಡೂನ್‌ನಲ್ಲಿ ಆರಂಭವಾಗಿದ್ದು, 19ರವರೆಗೂ ನಡೆಯಲಿದೆ. ಕರ್ನಾಟಕದಿಂದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪಾಲ್ಗೊಂಡಿದ್ದಾರೆ. ಸಂವಿಧಾನದ 10ನೇ ಶೆಡ್ಯೂಲ್ ಪ್ರಕಾರ ಸಂಸದೀಯ ಪಕ್ಷವೊಂದರ ಸದಸ್ಯರ ಪಕ್ಷಾಂತರ ತಡೆಯಲು ಅವಕಾಶವಿದೆ. ಪಕ್ಷದ ನೀತಿಗೆ ಬದ್ಧವಾಗಿ ಎಲ್ಲ ಸದಸ್ಯರೂ ಇರುವಂತೆ ಮಾಡಲು ವಿಪ್ ಜಾರಿ ಮಾಡಲಾಗುತ್ತದೆ. ವಿಪ್ ನೀಡಿದ ನಂತರವೂ ಸದನಕ್ಕೆ ಗೈರುಹಾಜರಾಗುವ ಸದಸ್ಯರನ್ನು ಸದಸ್ಯತ್ವದಿಂದ ಅನರ್ಹ ಗೊಳಿಸಬಹುದು ಎನ್ನುತ್ತದೆ 10ನೇ ಶೆಡ್ಯೂಲ್. ಆದರೆ, ಈ ಬಗ್ಗೆ ಗೊಂದಲಗಳೂ ಇವೆ. 10ನೇ ಶೆಡ್ಯೂಲ್ ಮತ್ತು ಸ್ಪೀಕರ್ ಪಾತ್ರದ ಬಗ್ಗೆ ಸಮ್ಮೇಳನದಲ್ಲಿ ವಿಚಾರ ವಿನಿಮಯ ನಡೆಯಲಿದೆ.